ವಿಪಕ್ಷದವರಿಗೂ ನನ್ನ ಯುದ್ಧ ಹೇಗೆ?

ಯುಧಿಷ್ಠಿರ: ಅಪರಾಜಿತನಾದ ನೀನು ಇದ್ದರೆ ನಾವು ಗೆಲ್ಲುವುದು ಹೇಗೆ? ಇದನ್ನಾದರೂ ಹೇಳಿಕೊಡು ನಮ್ಮ ಶ್ರೇಯಸ್ಸಿಗಾಗಿ.

ಭೀಷ್ಮ: ಅದು ಮಾತ್ರ ಗೊತ್ತಿಲ್ಲ ಮಗು. ನಾನು ಯುದ್ಧ ನಡೆಸುತ್ತಿರುವ ತನಕ ಯಾವ ಗಂಡಸು ಗೆಲ್ಲಲಾರ ಸಾಕ್ಷಾತ್ ಶತಕ್ರತು ಬಂದರೂ...

ಯುಧಿಷ್ಠಿರ: ಅದು ನನಗೆ ಗೊತ್ತಿರುವುದರಿಂದಲೇ, ನಿನ್ನನ್ನು ಗೆಲ್ಲೋ ಉಪಾಯ ಹೇಳಿಕೊಡು ಎಂದು ಕೇಳುತ್ತಾ ಇರುವುದು.

ಭೀಷ್ಮ: ನನ್ನನ್ನು ಗೆಲ್ಲುವಂಥವನು ನನಗಂತೂ ಕಾಣಿಸುತಿಲ್ಲಪ್ಪ. ನನಗೆ ಸಾಯುವ ಕಾಲವೂ ಬಂದಿಲ್ಲ. ಮತ್ತೊಂದು ಸಾರಿ ಬಾ ನೋಡೋಣಂತೆ.

ಭೀಷ್ಮನಿಗೆ ತಲೆ ಮುಟ್ಟಿ ನಮಸ್ಕಾರ ಮಾಡಿದ ಆ ಮಹಾಬಾಹು ತಮ್ಮಂದಿರ ಜತೆ ಆಚಾರ್ಯನ ರಥದ ಕಡೆ ತಿರುಗಿದ. ಇಡೀ ಸೈನ್ಯ ಅವನನ್ನು ನೋಡುತ್ತಿತ್ತು. ದ್ರೋಣನಿಗೆ ಶರಣು ಮಾಡಿ 'ನಿನ್ನ ಅನುಮತಿಯಿಂದ ಯುದ್ಧವನ್ನ ಬಯಸುತ್ತೇನೆ ಭಗವಾನ್, ಕಲ್ಮಶ ಇಲ್ಲದ ಬ್ರಾಹ್ಮಣ ನೀನು ಹೇಗೆ ಎಲ್ಲ ಶತ್ರುಗಳನ್ನು ಗೆಲ್ಲುವುದು ಹೇಳು' ಅಂದ.

ದ್ರೋಣ: ಯುದ್ಧದ ತೀರ್ಮಾನ ಮಾಡಿಕೊಂಡ ಮೇಲೆ ನನ್ನ ಹತ್ತಿರ ಬರದಿದ್ದರೆ ಎಲ್ಲ ಥರದ ಸೋಲಿನ ಶಾಪ ಕೊಟ್ಟು ಬಿಡುತ್ತಿದ್ದೆ. ನೀನು ಆದರಿಸಿದೆ ಖುಷಿಯಾಯಿತು. ನಿನಗೆ ಯುದ್ಧದಲ್ಲಿ ಜಯ ಸಿಗುತ್ತದೆ.

ನಿನ್ನ ಆಸೆ ಏನು ಹೇಳು, ನಡೆಸಿಕೊಡುತ್ತೇನೆ. ಯುದ್ಧ ಮಾಡಬೇಡ ಅನ್ನುವುದನ್ನು ಬಿಟ್ಟು ಬೇರೆ ಏನನ್ನಾದರೂ ಕೇಳಿಕೋ. ಮನುಷ್ಯ ಹಣಕ್ಕೆ ದಾಸ ಹಣ ಯಾವತ್ತೂ ಮನುಷ್ಯನಿಗೆ ಗುಲಾಮ ಆಗೋದಿಲ್ಲ. ಇದು ನಿಜ. ಹಣದ ಋಣದಲ್ಲಿ ನಾನು ಕೌರವನಿಗೆ ಅಂಟಿಕೊಂಡು ಬಿಟ್ಟಿದ್ದೇನೆ.

ಹಾಗಾಗೇ ಷಂಡನ ಥರ ಮಾತಾಡುತ್ತಿದ್ದೇನೆ. ಯುದ್ಧ ಬೇಡ ಅನ್ನುವುದು ಬಿಟ್ಟು ಬೇರೇನು ಬೇಕು. ನಾನು ಕೌರವನಿಗೋಸ್ಕರ ಯುದ್ಧ ಮಾಡುತ್ತಿದೇನೆ. ಆದರೆ ನಿನಗೆ ಜಯವಾಗಲಿ ಎಂದು ಬಯಸುತ್ತಿದ್ದೇನೆ.

ಯುಧಿಷ್ಠಿರ: ಬುದ್ಧೀ, ನನ್ನ ಹಿತಕ್ಕೆ ದಾರಿ ತೋರಿಸು. ನನಗೆ ಗೆಲುವು ಬೇಕು. ಇದು ನನಗೆ ಬೇಕಾದ ವರ.

ದ್ರೋಣ: ಕೃಷ್ಣ ನಿನ್ನ ಮಂತ್ರಿಯಾಗಿರುವಾಗ ಗೆಲುವು ಕಟ್ಟಿಟ್ಟದ್ದು ಬಿಡು. ನನಗೆ ಗೊತ್ತು, ನಿನ್ನ ಶತ್ರುಗಳು ನಿನ್ನಿಂದ ಸಾಯುತ್ತಾರೆ. ನನ್ನಿಂದ ಏನು ಬೇಕು?

ಯುಧಿಷ್ಠಿರ: ನಾನು ಕೇಳುವುದು ಇಷ್ಟು. ನನ್ನ ಬಯಕೆ ಇದು. ಅಪರಾಜಿತನಾದ ನಿನ್ನನ್ನು ಗೆಲ್ಲುವುದು ಹೇಗೆ?

ದ್ರೋಣ: ನಾನು ಎಲ್ಲಿಯವರೆಗೆ ಯುದ್ಧ ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೆ ಯುದ್ಧವನ್ನು ನೀನು ಗೆಲ್ಲಲಾರೆ. ನೀನು ನಿನ್ನ ಒಡಹುಟ್ಟುಗಳ ಜತೆಗೂಡಿ ಸೇರಿ ನನ್ನನ್ನ ಬೇಗ ಕೊಲ್ಲುವುದಕ್ಕೆ ನೋಡು.

ಯುಧಿಷ್ಠಿರ: ಹಾಗಾದರೆ ಈ ಮಹಾಯುದ್ಧದಲ್ಲಿ ನಿನ್ನನ್ನ ಕೊಲ್ಲುವ ಉಪಾಯ ಹೇಳಿಕೊಡು. ನಿನಗೆ ಶರಣು ಕಾಲಿಗೆ ಬೀಳುತ್ತಿದ್ದೇನೆ.

ದ್ರೋಣ: ನಾನು ರಥದಲ್ಲಿ ಕುಳಿತು ಯುದ್ಧ ನಿರತನಾಗಿದ್ದರೆ ನನ್ನನ್ನ ಕೊಲ್ಲಬಲ್ಲವನು ಇಲ್ಲವೇ ಇಲ್ಲ. ನಾನು ಶಸ್ತ್ರಾಸ್ತ್ರ ಬಿಟ್ಟು ಯೋಗದಲ್ಲಿ ಕುಳಿತಾಗ ನನ್ನನ್ನು ಕೊಲ್ಲಬಹುದು ಅಷ್ಟೇ.

ನಾನು ರಣರಂಗದಲ್ಲಿ ಶಸ್ತ್ರವನ್ನು ಕೆಳಗಿಡಬೇಕಾದರೆ ನನಗೆ ತೀರಾ ಅಪ್ರಿಯವಾದ ಸುದ್ದಿಯ ನಾನು ನಂಬುವ ಸತ್ಯವಂತನಾದವನ ಬಾಯಿಂದ ಕೇಳಬೇಕು ಇದು ಸತ್ಯ.

# ನಡೀತಿರೋದು ಕಾಣಿಸತಿರಲಿಲ್ಲ

ಸೂರ್ಯ ಮುಳುಗಿದಾಗಲೂ ಇನ್ನೂ ಯುದ್ಧ ನಡೀತಾನೇ ಇತ್ತು. ರಣದಲ್ಲಿ ನಡೀತಿರೋದು ಕಾಣಿಸುತಾನೆ ಇರಲಿಲ್ಲ. ಮುಸ್ಸಂಜೆ ಭಯಾನಕವಾಗಿ ಬಿಟ್ಟಿತು. ಜೀವಗಳನ್ನೆಲ್ಲ ಮರುಳು ಮಾಡೋ ರಣಭಯಂಕರ ಸಂಜೆ.

ಯುಧಿಷ್ಠಿರ ಆ ಸಂಜೆಯನ್ನ ನೋಡಿದ ಭೀಷ್ಮನ ಹೊಡೆತ ತಡೀಲಾರದೆ ಹೆದರಿ ಬಿಲ್ಲು ಬಾಣ ತೊರೆದು ಭಯಭೀತರಾಗಿ ಓಡುತಾ ಇರುವ ತನ್ನ ಸೇನೇನ ನೋಡಿದ. ಪಾಡುಪಡತಾ ಇರುವ ತನ್ನ ಕಡೆಯ ಮಹಾರಥರನ್ನು ನೋಡಿದ.

ಭಯ ಆಗುವಷ್ಟು ಕತ್ತಲು ಸುತ್ತಿಕೊಳ್ಳುತ್ತಿತ್ತು. ಸೋಮಕರೂ ಸೋತು ಹುರುಪು ಕಳಕೊಂಡಿದ್ದರು. ಈವತ್ತಿನ ಯುದ್ಧ ಸಾಕು, ಹಿಂದಿರುಗೋಣ ಅಂದುಕೊಂಡ ಯುಧಿಷ್ಠಿರ.

ಮಹಾಬಲ ಭೀಷ್ಮನ ಪರಾಕ್ರಮಾನ ಗೆಲ್ಲೋದು ತಾನೇ ಹೇಗೆ? ಇನ್ನು ಶಿಬಿರಕ್ಕೆ ಹೋಗಿಬಿಡೋದು ಲೇಸು ಅಂದುಕೊಂಡ ಯುಧಿಷ್ಠಿರ ಸೇನೇನ ವಾಪಸ್ಸು ಕರೆದ. ಸೇನೆ ಹಿಂದಕ್ಕೆ ಮರಳಿತು. ಶಿಬಿರಕ್ಕೆ ಬಂದ ಸೇನೇನ ನೋಡಿದ. ರಣಗಾಯವಾಗಿತ್ತು ಅದಕ್ಕೆ.

ಅವತ್ತಿನ ಯುದ್ಧದಲ್ಲಿ ಭೀಷ್ಮ ನಡೆಸಿದ್ದನ್ನೆಲ್ಲಾ ನೆನೆಸಿಕೊಳ್ಳುತಾನೇ ಇದ್ದರು ಪಾಂಡವರು. ಅವನ ಬಾಣಗಳು ಇನ್ನೂ ಇವರನ್ನ ನರಳಿಸುತಾನೇ ಇತ್ತು. ಏನು ಮಾಡಿದರೂ ಅವರೊಳಗೆ ನೆಮ್ಮದಿ ಸುಳಿಯುತ್ತಿರಲಿಲ್ಲ.

ಪಾಂಡವರನ್ನು ಸೃಂಜಯ ಸಮೇತ ಗೆದ್ದು

ಆ ಹಿಗ್ಗಲ್ಲೇ ಭೀಷ್ಮನೂ ತನ್ನ ಶಿಬಿರ ಹೊಕ್ಕ

ನಿನ್ನ ಮಕ್ಕಳು ಮುಗಿಬಿದ್ದು ಅವನನ್ನು ಕೊಂಡಾಡತಾ ಅಡ್ಡ ಬೀಳತಾ ಇದ್ದರು.

ಆ ದಾರುಣವಾದ ಮುನ್ನಿರಳಲ್ಲಿ ಸೃಂಜಯರು, ವೃಷ್ಣಿಗಳು, ಪಾಂಡವರು ಮಂತ್ರಾಲೋಚನೆಗೆ ಸೇರಿಕೊಂಡರು.

ಹೇಗೆ ಚರ್ಚೆ ನಡೆಸಬೇಕು, ಹೇಗೆ ನಿರ್ಧಾರಕ್ಕೆ ಬರಬೇಕು ಅಂತ ತಿಳಿದ ಜನ ಅವರು. ಒಬ್ಬೊಬ್ಬರೂ ಅವರವರ ಸರದಿ ಬಂದಾಗ ಸಮಾಧಾನವಾಗಿ ತಮಗೆ ತೋಚಿದ ಲೇಸಿನ ಮಾತುಗಳನ್ನು ಹೇಳಿದರು.

ಆಮೇಲೆ ರಾಜಾ ಯುಧಿಷ್ಠಿರ ಕೃಷ್ಣನ ಕಡೆ ನೋಡತಾ ಹೀಗೆ ಮಾತು ತೆಗೆದ.

ಯುಧಿಷ್ಠಿರ: 'ಕೃಷ್ಣ, ಹೊಡಕೆಯ ನಲವನವನ್ನು ಆನೆಯು ಮಿದ್ದಿದ ಹಾಗೆ ಈ ಮಹಾನುಭಾವ, ಪರಾಕ್ರಮಿ ಭೀಷ್ಮ ನನ್ನ ಬಲಾನೆಲ್ಲಾ ಮಿದ್ದಿ ಹಾಕಿಬಿಟ್ಟ.

ಅವನ ಕೈಲಿ ಕೊಲ್ಲಿಸಿಕೊಳ್ಳತಾ ಇರೋ ನನ್ನ ಜನಕ್ಕೆ ಯುದ್ಧ ಮಾಡಿ ಅಂತ ಹೇಳೋದಾದರೂ ಹೇಗೆ?

ನಾಲಗೆ ಚಾಚಿಕೊಂಡು ಏರೇರಿಕೊಂಡು ಬರೋ ಕಿಚ್ಚಿನ ಥರ ಸುಟ್ಟು ಹಾಕತಾ ಇರೋ ಅವನನ್ನ ಎದುರಿಸೋದು ಇರಲಿ, ನಮ್ಮ ಕೈಲಿ ನೋಡೋಕೂ ಆಗಲ್ಲ.

ತಕ್ಷಕ ಅನ್ನೋ ವಿಷ ತುಂಬಿಕೊಂಡ ಹಾವಿನ ಹಾಗೆ ಭೀಷ್ಮ ಮುನಿದು ಹರಿತ ಮಾಡಿಕೊಂಡ ಕತ್ತಿ ಹಿರಿದರೆ ಒಂದು ಕೈಲಿ ಬಿಲ್ಲು ಹಿಡಿದು ಮೊನಚಾದ ಬಾಣ ಬಿಡತಾ ಇದ್ದರೆ ಯಮ ಇರಲಿ ಮುನಿದು ನಿಂತ ದೇವರಾಜ ವಜ್ರಪಾಣೀನೇ ಏಗಲಾರ.

ವರುಣ ಪಾಶ ಹಿಡಿದು ಬಂದರೂ ಇಲ್ಲ, ಕುಬೇರ ಗದೆ ಹಿಡಿದು ಬಂದರೂ ಇಲ್ಲ

ಭೀಷ್ಮ ರಣರಂಗದಲ್ಲಿ ಮುನಿದು ನಿಂತರೆ ಗೆಲ್ಲುವುದು ಯಾರ ಕೈಲೂ ಇಲ್ಲ.

ಉರೀತಾ ಇರೋ ಕಿಚ್ಚಿಗೆ ಪತಂಗ ಹಾರೋದೂ ಒಂದೇ, ನಾವು ಭೀಷ್ಮನ ಎದುರು ಬೀಳೋದೂ ಒಂದೇ. ರಾಜ್ಯದ ಕಾರಣಕ್ಕೆ ವಿನಾಶ ತಂದುಕೊಂಡುಬಿಟ್ಟೆ. ನಾನು ಭೀಷ್ಮನ ಹತ್ತಿರ ಹೋದರೆ ಸಾಕು, ಬುದ್ಧಿ ಸೋರಿ ಹೋಗತ್ತೆ. ದುಃಖದ ಸಮುದ್ರದಲ್ಲಿ ಮುಳುಗಿ ಹೋಗ್ತೀವಿ.

ಈ ಯುದ್ಧ ಸಾಕು, ನನಗೆ ಬೇಡ ಕಣಪ್ಪ. ಭೀಷ್ಮ ನಮ್ಮನ್ನ ಕೊಂದು ಹಾಕತಾನೇ ಇರತಾನೆ ಅವನು ಆದಿವೀರ. ನಾನು ಕಾಡಿಗೆ ಹೊರಟು ಹೋಗ್ತೀನಿ. ಒಳಿತೆಂದರೆ ಈಗ ಕಾಡೇನೇ ನನ್ನ ತಮ್ಮಂದಿರಂಥ ಶೂರರೇ ಅವನ ಬಾಣದಿಂದ ಬಹಳ ನೊಂದು ಬಳಲಿದಾರೆ. ನನ್ನ ತಪ್ಪಿಗೆ ರಾಜ್ಯ ಕಳಕೊಂಡು, ಅಣ್ಣ ಅಂತ ನುಂಗಿಕೊಂಡು ಕಾಡುಪಾಲಾದರು, ಕೃಷ್ಣ ಕೂಡ ಪಡಬಾರದ ಭಂಗಪಟ್ಟಳು.

ನೋಡು ಮಧುಸೂದನ, ಎಲ್ಲಕ್ಕಿಂತ ಬದುಕು ದೊಡ್ಡದು. ಇವತ್ತು ಅದನ್ನ ಉಳಿಸಿಕೊಳ್ಳೋದೇ ಕಷ್ಟ ಆಗತಿದೆ. ಇವತ್ತು ಹೇಗೋ ಪ್ರಾಣ ಉಳಿಸಿಕೊಂಡು ಬಾಕಿ ಬದುಕನ್ನ ಒಳ್ಳೇ ಧರ್ಮದಲ್ಲಿ ಕಳೆದುಬಿಡತೀನಿ ಕೇಶವ, ನನ್ನ ಮೇಲೆ, ನನ್ನ ತಮ್ಮಂದೀರ ಮೇಲೆ ನಿನಗೆ ಅನುಗ್ರಹ ಇದ್ದರೆ ನಮ್ಮ ಸ್ವಧರ್ಮಕ್ಕೆ ಹಿತ ಆಗೋದನ್ನಷ್ಟೇ ಮಾತಾಡು.

ಸಂಜಯ: ಇದೆಲ್ಲವನ್ನೂ ಕೃಷ್ಣ ಒಂದಿನಿತೂ ಬಿಡದ ಹಾಗೆ ಕಾರುಣ್ಯದಿಂದ ಕೇಳಿಸಿಕೊಂಡ. ಯುಧಿಷ್ಠಿರನನ್ನು ಸಂತೈಸುತ್ತಾ ಅಂದ

ಕೃಷ್ಣ: 'ಧರ್ಮಪುತ್ರ, ಹಾಗೆ ದುಃಖ ಪಡಬಾರದು.